(3)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ

ವಿಷಯ:- 2018-19ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ - 3158 (ನಗರೋತ್ಥಾನ) ಅನುದಾನದ ಅಡಿಯಲ್ಲಿ ಅನುಮೋದಿತ ಕಾಮಗಾರಿಗೆ ಜಾಬ್ ಕೋಡ್ ನೀಡುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು ರವರ ಆದೇಶ ಸಂ: 3459 ದಿ: 20/10/2018

* * * *

2016-17ನೇ ಸಾಲಿನಲ್ಲಿ ಘನ ಸರ್ಕಾರದ ಆದೇಶದ ಸಂಖ್ಯೆ:ನಅಇ/199/ಎಸ್.ಎಫ್.ಸಿ/2016(ಭಾಗ-1), ದಿ:21-06-2016 ರಲ್ಲಿ ಅನುಬಂಧ -03 ರ ಕ್ರಮ ಸಂಖ್ಯೆ: 04 ರಲ್ಲಿ ಅನುಮೋದಿತ ಕಾಮಗಾರಿಯಾದ Construction of under pass at junction of Kariyappa Road and 27th cross road in front of Yediyur Commercial complex ಕಾಮಗಾರಿಗೆ ರೂ.1200.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, 2016-17ನೇ ಸಾಲಿನ ಪಾಲಿಕೆ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-304-17-000021 ರಲ್ಲಿ ಜಾಬ್ ಸಂಖ್ಯೆ ನೀಡಲಾಗಿರುತ್ತದೆ.

ಮೇಲ್ಕಂಡ ಕಾಮಗಾರಿಯ ಬದಲಾಗಿ ಸರ್ಕಾರದ ಆದೇಶದ ಸಂಖ್ಯೆ:ನಅಇ/758/ಎಂ.ಎಸ್.ಪೈ/2016-17, ದಿ:24-02-2018 ರಲ್ಲಿ ವಾರ್ಡ್ ಸಂಖ್ಯೆ:94, 159, 130 ಮತ್ತು 06 ವಾರ್ಡ್‌ಗಳಿಗೆ ಸಂಬಂಧಿಸಿದಂತೆ ಬದಲಿ 12 ಕಾಮಗಾರಿಗಳಿಗೆ ಒಟ್ಟು ಅಂದಾಜು ಮೊತ್ತವಾದ ರೂ.1200.00 ಲಕ್ಷಗಳಿಗೆ ಅನುಮೋದನೆ ನೀಡಲಾಗಿದ್ದು ಹಾಗೂ ಈಗಾಗಲೇ ನೀಡಿದ ಜಾಬ್ ಸಂಖ್ಯೆಯಾದ 304-17-000021 ಅನ್ನು ರದ್ದುಗೊಳಿಸಿ 2017-18ನೇ ಸಾಲಿನ ಪಿ-3158 ಅಡಿ ವಾರ್ಡ್ ಸಂಖ್ಯೆ:94, 159 ಮತ್ತು 130 ರೂ.1000.00 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿದೆ. ಉಳಿದ ವಾರ್ಡ್ ಸಂಖ್ಯೆ:06 ಕ್ಕೆ ರೂ.200.00 ಲಕ್ಷಗಳ ಕಾಮಗಾರಿಯಾದ Improvements to drains (concrete drain) & comprehensive development of roads from 12 A cross to 20th R cross at Bhuvaneshawari Nagara near Coffee Board park ward No.06 Byatarayanapura Assembly Consitituency (near Coffee Board Park) ಕಾಮಗಾರಿಗೆ ಜಾಬ್ ಕೋಡ್ ಪಡೆದಿರುವುದಿಲ್ಲ. ಮುಖ್ಯ ಅಭಿಯಂತರರು (ಯಲಹಂಕ) ರವರು ಸದರಿ ಪ್ರಸ್ತಾಪಿತ ಕಾಮಗಾರಿಗೆ ಜಾಬ್ ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ರವರು ಅನುದಾನ ಲಭ್ಯತೆಯ ಬಗ್ಗೆ ವರದಿ ಮಾಡಿರುವಂತೆ ಮೇಲ್ಕಾಣಿಸಿದ ಅನುಮೋದಿತ ಕಾಮಗಾರಿಗೆ 2017-18ನೇ ಸಾಲಿನ ಆಯವ್ಯಯದ ತತ್ರಾಂಶ ಸ್ಥಗಿತಗೊಳಿಸಲಾಗಿದ್ದು, 2018-19ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-3158 ರ ಅಡಿಯಲ್ಲಿ ರೂ.200.00 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್ ಸಂಖ್ಯೆ ನೀಡಬೇಕಾಗಿದ್ದು, ಮಾನ್ಯ ಆಯುಕ್ತರು ರವರ ಅನುಮೋದನೆ ಪಡೆದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಜಾಬ್ ಸಂಖ್ಯೆ ಪಡೆಯುವ ಬಗ್ಗೆ ಸೂಕ್ತ ತೀರ್ಮಾನ ಕೋರಲು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಪ್ರಸ್ತಾವನೆಯ ಸೂಕ್ತ ತೀರ್ಮಾನಕ್ಕಾಗಿ ಟಿಪ್ಪಣಿಯೊಂದಿಗೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರು ರವರ ಆದೇಶದಂತೆ ಪ್ರಸ್ತಾಪಿತ ವಾರ್ಡ್ ಸಂಖ್ಯೆ:06ರ ಕಾಮಗಾರಿಯಾದ Improvements to drains (concrete drain) & comprehensive development of roads from 12th A cross to 20th R cross at Bhuvaneshawari Nagara near Coffee Board park ward No.06 Byatarayanapura Assembly Consitituency (near Coffee Board Park) ಅಂದಾಜು ಮೊತ್ತವಾದ ರೂ.200.00 ಲಕ್ಷಗಳಿಗೆ 2018-19ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-3158 ಅಡಿ ಅಳವಡಿಸಿಕೊಂಡು ಜಾಬ್ ಸಂಖ್ಯೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

k-

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(8)

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 758 ಎಂಎನ್‌ವೈ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 14-03-2018.

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

Spl. Com (Projects) & CE (West) for necessary action 14/3/18

ಇವರಿಗೆ,

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೇ,

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 94ರ ನಗರೋತ್ಥಾನ ವಿಶೇಷ ಅನುದಾನದಡಿಯಲ್ಲಿ ಕೈಗೊಳ್ಳಲು ಅನುಮೋದನೆ ನೀಡಿರುವ ಬದಲಿ ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಮುಖೇನ ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: 1. ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಅಇ 262 ವೆಚ್ಚ-12/2017, ದಿನಾಂಕ: 22-04-2017.
2. ಸರ್ಕಾರದ ಆದೇಶ ಸಂಖ್ಯೆ: ನಅಇ 758 ಎಂಎನ್‌ವೈ 2016, ದಿನಾಂಕ: 24-02-2018.
3. ತಮ್ಮ ಪತ್ರ ಸಂಖ್ಯೆ: ಅ.ಆ.ಪಿಆರ್/PRSN/8053/2017-18, ದಿನಾಂಕ: 02-03-2018.

CE(GN) & CE(K) Pl. put up accordingly 14/3

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ದಿನಾಂಕ: 22-04-2017ರ ಅಧಿಸೂಚನೆಯಲ್ಲಿ ಆರ್ಥಿಕ ಇಲಾಖೆಯವರು ಕೆಲವೊಂದು ಷರತ್ತುಗಳನ್ನು ವಿಧಿಸಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಅಧಿನಿಯಮ 1999ರ ಕಲಂ 4(ಜಿ) ರಡಿಯಲ್ಲಿ ದಿನಾಂಕ: 01-04-2017 ರಿಂದ ಒಂದು ವರ್ಷದ ಅವಧಿಗೆ ಪುರ್ತು ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ವಿನಾಯಿತಿಯನ್ನು ನೀಡಿರುತ್ತಾರೆ.

. . . 2 .

ಉಲ್ಲೇಖ (2)ರ ದಿನಾಂಕ: 24-02-2018 ರಲ್ಲಿ ಒಟ್ಟು 12 ಬದಲಿ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಲಾಗಿದೆ. ಉಲ್ಲೇಖಿತ (3)ರ ದಿನಾಂಕ: 02-03-2018ರ ಪತ್ರದಲ್ಲಿ, ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಲು, ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮೂಲಕ ಅನುಮೋದನೆ ಕೋರಿರುವ ವಿಷಯವನ್ನು ಪರಿಶೀಲಿಸಿದೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 758 ಎಂಎನ್‌ವೈ 2016, ದಿನಾಂಕ: 24-02-2018 ರಲ್ಲಿ ಅನುಮೋದಿಸಿ ನೀಡಿರುವ ಈ ಕೆಳಕಂಡ 12 ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮೂಲಕ ನಿರ್ವಹಿಸಲು ಅನುಮೋದನೆಯನ್ನು ನೀಡಿದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ಕ್ರಮ ಸಂಖ್ಯೆ	ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸಲು ಅನುಮೋದನೆ ನೀಡಿರುವ ಕಾಮಗಾರಿಗಳ ಹೆಸರು	ಮಂಜೂರಾತಿ ನೀಡಿರುವ ಅಂದಾಜು ಮೊತ್ತ (ಮೊ.ಲಕ್ಷಗಳಲ್ಲಿ)
1.	Improvements to foothpath and drain east side from south end road upto Nataraj theatre in Ward no.94.	100.00
2.	Improvements to foothpath and drain both sides at south end road upto link road in ward no.94.	100.00
3.	Development of triangular park at Sheshadripuram in ward no.94.	50.00
4.	Development of Rajkumar Park at Gandhinagar in ward no.94.	50.00
5.	Improvements to drain and footpath at JM Lane in ward no.94.	100.00
6.	Improvements to drain and footpath at RV Shetty Layout in ward no.94.	100.00
7.	Improvements to drain in 6th main and improvements to drain and footpath in Kommaghatta road in ward no.159, Kengeri.	100.00
8.	Improvements to roads and drain in Mahaveer apartment surrounding area in ward no.159, Kengeri.	100.00
9.	Improvements to roads and drains at Nagadevanahalli and Doddagolla rahatti surrounding area in ward no.130.	100.00
10.	Improvements of drains and culverts at 2nd Block, Ganesha temple surrounding in Ullal Upanagar in ward no.130.	100.00
11.	Improvements of drains and culverts at 2nd Block, Om shakti temple surrounding in Ullal Upanagar in ward no.130.	100.00
12.	Improvements to drains (Concrete drain) and comprehensive development of roads from 12th A cross to 20th R cross at Bhuvaneshwari nagar near coffee board park ward no. 06, Byatarayanpur Assembly Constitue ncy (Near coffee board Park)	200.00

<u>ಷರತ್ತುಗಳು:</u>

1. ಸದರಿ ಮೇಲಿನ ಕಾಮಗಾರಿಗಳು ಪುನರಾವರ್ತನೆಯಾಗದಂತೆ ಮತ್ತು ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಂಡು ನಿರ್ವಹಿಸತಕ್ಕದ್ದು.

2. ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಮೇಲಿನ ಕಾಮಗಾರಿಗಳನ್ನು ತನ್ನದೇ ಆಂತರಿಕ ಸಂಪನ್ಮೂಲಗಳಿಂದ ಕಾರ್ಯಗೊಳಿಸತಕ್ಕದ್ದು. ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ಅಧಿನಿಯಮಗಳು, ಇ-ಸಂಗ್ರಹಣಾ ವೇದಿಕೆಯ ಮೂಲಕ ಕೈಗೊಳ್ಳಬೇಕು.

. . . 3 .

3. ಈ ಅಧಿಸೂಚನೆಯ ಅವಧಿಯು ಮುಕ್ತಾಯಗೊಳ್ಳುವುದರೊಳಗಾಗಿ, KHB ಮಾದರಿಯಲ್ಲಿಯೇ KRIDL ಸಂಸ್ಥೆಯು ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳನ್ವಯವೇ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು.

4. ಸರ್ಕಾರದ ಇಲಾಖೆಗಳು/ನಿಗಮಗಳು/ಮಂಡಳಿಗಳು ಯಾವುದೇ ಕಾಮಗಾರಿಗಳನ್ನು Spilt ಮಾಡಿ ಕೆ.ಆರ್.ಐ.ಡಿ.ಎಲ್.ಗೆ ವಹಿಸಬಾರದು.

5. ಉತ್ತಮ ಗುಣಮಟ್ಟದ ಕಾಮಗಾರಿ/ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಪಾಲಿಕೆಯು ಧೃಡಪಡಿಸಿಕೊಂಡು ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

6. ಈ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 185 ಎಂಎಸ್‌ಪಿ 2017, ದಿನಾಂಕ: 26-12-2017 ರಲ್ಲಿ ಮೀಸಲಿಟ್ಟ ಅನುದಾನದಿಂದ ಭರಿಸುವುದು.

7. ಮೇಲಿನ ಕಾಮಗಾರಿಗಳನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಪೆಟ್ಟುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.

8. ಮೇಲಿನ ಕಾಮಗಾರಿಗಳಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.

9. ಕಾಮಗಾರಿಗಳ ಅಂಶಗಳ ವಿಶಿಷ್ಟ ವಿವರಣೆಯು ಲೋಕೋಪಯೋಗಿ ಇಲಾಖೆಯ ದರಪಟ್ಟಿಯಲ್ಲಿ ಸೂಚಿಸಿರುವಂತೆ ಇರತಕ್ಕದ್ದು.

10. ಮೇಲಿನ ಕಾಮಗಾರಿಗಳು ಯಾವುದೇ ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳಲ್ಲಿ ಸೇರಿರುವುದಿಲ್ಲವೆಂದು ಖಾತರಿಪಡಿಸಿಕೊಳ್ಳತಕ್ಕದ್ದು.

11. ಮೇಲಿನ ಯಾವುದೇ ಕಾಮಗಾರಿಗಳ ಅನುಷ್ಠಾನದಿಂದ ಇತರ ಯಾವುದೇ ಕಾಮಗಾರಿಯ ಅನುಷ್ಠಾನದಿಂದ ಇತರ ಯಾವುದೇ ಕಾಮಗಾರಿಗಳ ಅನುಷ್ಠಾನ, ನಿರ್ವಹಣಾ ಅವಧಿ (Maintenance Period) ಅಥವಾ ದೋಷ ಬಾಧ್ಯತಾ ಅವಧಿ (Defects Liability Period) ಯನ್ನು ಉಲ್ಲಂಘಿಸಿಲ್ಲವೆಂದು ಖಾತ್ರಿ ಪಡಿಸಿಕೊಳ್ಳುವುದು.

ತಮ್ಮ ನಂಬುಗೆಯ,

(ಕೆ. ಹರೀಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.).